
ಪ್ರೇಮಲತ ಬಿ.

ಕಲೆ: ವೆಂಕಟ್ರಮಣ ಭಟ್

# ಅಪರಿಚಿತ ಪುಟಗಳು



## 1

ಲಂಡನ್ನಿನಿಂದ ಗೋಥೆನ್‌ಬರ್ಗ್‌ಗೆ ಕೇವಲ ನಾಲ್ಕು ಗಂಟೆಗಳ ಪ್ರಯಾಣ. ನಾನು ನೋಡಿದ್ದ ಎಲ್ಲ ಏರೋಪ್ಲೇನುಗಳಿಗಿಂತ ಪುಟ್ಟದಾದ ವಿಮಾನವದು. ಅಬ್ಬಬ್ಬಾ ಎಂದರೆ ಹನ್ನೆರಡು ಸೀಟುಗಳು. ಸಿರಿಯಾ, ಇರಾಕ್, ಇಂಗ್ಲೆಂಡ್, ರಷ್ಯಾ ಮತ್ತು ಭಾರತದ ನಾನು ಸೇರಿದಂತೆ, ತರಬೇತಿಯ ಶಿಬಿರಕ್ಕೆಂದು ಹೋಗುತ್ತಿದ್ದ ಆರು ಜನರಿದ್ದೆವು. ಜೊತೆಗೆ ನಮ್ಮ ಬ್ರಿಟಿಷ್ ತರಬೇತುದಾರ ಅಲೆಕ್ಸ್ ಮತ್ತು ಸ್ವೀಡನ್ನಿನ ಕಂಪನಿಯ ರೀಸ್ ಎಂಬ ಒಬ್ಬ ಏಜೆಂಟ್ ಇದ್ದರು. ಎಂಟು ಜನರ ಈ ತಂಡವನ್ನು ಉಪಚರಿಸಲು ಇಬ್ಬರು ಗಗನಸಖಿಯರಿದ್ದರು.

ಗಂಟೆಗೊಮ್ಮೆ ತಿಂಡಿ–ತಿನಿಸು, ಪಿಜ್ಜಾ, ಐಸ್ ಕ್ರೀಂ, ಕೇಕು, ಕುಡಿಯಬಹುದಾದಷ್ಟು ಮದ್ಯ ಸರಬರಾಜಾಗಲು ಶುರುವಾಯ್ತು. ಅಷ್ಟಕ್ಕೂ ನಾವೆಲ್ಲ ಪ್ರಬುದ್ಧ ವಿದ್ಯಾರ್ಥಿಗಳ ಸೋಗಿನಲ್ಲಿದ್ದವರಲ್ಲವೇ?